ಪ್ರಬಂಧ

# ಗಂಟೆರೋತನಕ ಎಲ್ರೂ ನೆಂಟ್ರೇ



**ಮಲ್ಲಿಕಾರ್ಜುನ ಹುಲಗಬಾಳಿ**

ಕಲೆ: ಸಂತೋಷ್ ಸಸಿಹಿತ್ಲು

ಮನುಷ್ಯನ ಸ್ವಭಾವ ಅರ್ಥ ಮಾಡಿಕೊಳ್ಳೋದು ಅಂತಂದ್ರೆ, ಅದೇನು ಅಷ್ಟು ಹಗುರವಲ್ಲ ಬಿಡ್ರಿ. ಚಂಚಲ ಅಂದರೆ ಅತೀ ಚಂಚಲ. ಒಂದು ಹೊಸ ವಸ್ತುವೇನಾದರೂ ಕಣ್ಣಿಗೆ ಬಿತ್ತೋ, ಮುಗೀತು ಅದರ ಕಥೆ. ಅದನ್ನು ಆತ ಪಡ್ಕೊಳ್ಳುವತನಕ ಕಟಪಟಿ ಅನ್ನೋದು ನಿಲ್ಲೋದೇ ಇಲ್ಲ. ಈಗಾಗಲೇ ತನ್ನ ಬಳಿ ಇರುವ ಹಳೆಯ ವಸ್ತುವಿನ ಮೇಲಿನ ಪ್ರೀತಿ ಅಷ್ಟೊತ್ತಿಗಾಗಲೇ ಕರಗಿ, ಮತ್ತೊಂದು ಹೊಸ ವಸ್ತುವಿನ ಮೇಲೆ ಮೋಹ ಹುಟ್ಟಿಕೊಂಡಿರುತ್ತದೆ.

ಈಗ ಈ ಉದಾಹರಣೆಯನ್ನೇ ನೋಡಬಹುದು. ಈಗ್ಗೆ ಕೆಲವು ವರ್ಷಗಳ ಹಿಂದೆ, ಐದ್ನೂರರದು ಮತ್ತೇ ಸಾವಿರರದು ಕರೆನ್ಸಿ ಸಮಯದಲ್ಲಿ ಹೊಸದಾದ ಗರಿ ಗರಿ ಎರಡು ಸಾವಿರ ಮತ್ತು ಐದ್ನೂರರ ನೋಟ್ ಪಡೆದುಕೊಳ್ಳಲು ನಾವೆಲ್ಲಾ ಹಾತೊರೆದವರೇ! ತಾಸಾನುತಾಸುಗಟ್ಲೆ ಬ್ಯಾಂಕ್ ಮುಂದೆ, ಎಟಿಎಂ ಮುಂದೆ ಕ್ಯೂ ನಿಂತ್ಕೊಂಡವರೇ! ಹೊಸ ರೂಪ, ಹೊಸ ವಿನ್ಯಾಸದಲ್ಲಿ ಮಿಂಚುತಿದ್ದಂಥ ಎರಡು ಸಾವಿರದ ಆ 'ಪಿಂಕ್ ಕ್ವೀನ್'ಳ ವಾರೆನೋಟಕ್ಕೆ ಮರುಳಾದವರೆ! 'ಲವ್ ಆ್ಯಟ್ ಫಸ್ಟ್ ಸೈಟ್' ಅಂತಾರಲ್ಲಾ ಹಾಗಿತ್ತು ಅದು. ಕೆಲವರು ಅದರ ಕೂಡ ಮೊಬೈಲ್‌ನೊಳಗ ಸೆಲ್ಫಿ ತಕ್ಕೊಂಡು ಸಂಭ್ರಮಿಸಿದರು. ಕೆಲವು ಸತ್ಯಾನ್ವೇಷಿಗಳು 'ಪಿಂಕ್ ಕ್ವೀನ್'ಳ ಅಂತರಂಗ ಶೋಧನೆಗೆ ಮುಂದಾದರು. ತಮ್ಮ ಭಾವ- ಭಾವನೆಗಳೊಂದಿಗೆ ತಳಕು ಹಾಕುತ್ತ, ಹೊಸ ಗಂಟಿಗೂ ತಮಗೂ ಅಂಟಿದ ನಂಟನ್ನು ಅರಿತುಕೊಳ್ಳಲು ಉತ್ಸುಕರಾದರು. ಹೊಸ ನೋಟಿನ ಬಗ್ಗೆ ವಿಚಿತ್ರ ವದಂತಿಗಳನ್ನು ಗಾಳಿಯಲ್ಲಿ ತೇಲಿಬಂದವು. ಇಲ್ಲದಿರುವ ಚಿಪ್ಪಿಗಾಗಿ, ಸಮುದ್ರದೊಳಗಣ ಚಿಪ್ಪಿನಂತೆ ಬಾಯಿಬಿಟ್ಟು ಕುಳಿತವರೂ ಉಂಟು. ಹೊಸ ನೆಂಟಸ್ತನವಲ್ಲವೆ? ಬಹಳ ಜೋಪಾನದಿಂದ ಜತನದಿಂದ ನೋಡಿಕೊಂಡರು. ಮುಟ್ಟಿದರೆ ಮುನಿದುಕೊಂಡಾಳು, ತಟ್ಟಿದರೆ ಸೆಟೆದು ಕೊಂಡಾಳು ಎಂಬ ಎದೆಯ ಡವಡವಿಕೆ ನಮ್ಮೆಲ್ಲರದು.

ಮತ್ತೆ ಕೆಲವರು ಈ ಹೊಸ ನೋಟ್‌ಗಳ ರಕ್ಷಣೆಗಾಗಿ, ಹೊಸ ಹೊಸ ಪ್ರಯೋಗ ಕಂಡುಕೊಂಡರು. ಬ್ಯಾಂಕುಗಳಲ್ಲಿನ ಸೇಫ್ ಲಾಕರ್ ಅವರಿಗೆ ಸೇಫ್ ಆಗಿ ಕಾಣಲಿಲ್ಲವೇನೊ! ಬೆಡ್‌ರೂಮ್‌ನೊಳಗೆ, ಬಾತ್‌ರೂಮ್ ಗೋಡೆಯೊಳಗೆ ಆಶ್ರಯ ನೀಡಹೋಗಿ, ನಂತರ ಸಿಕ್ಕಿಹಾಕಿಕೊಂಡರು. ಹೊಸತು ಅಂದರೆ ಹಾಗೇನೇ! ಯುಗ ಯುಗ ಕಳೆದರೂ ಹೊಸತು ಹೊಸತು ತರುವುದರಿಂದಾಗಿಯೇ ಅಲ್ಲವೇ, ನಾವು ಯುಗಾದಿಯನ್ನು ಆಮೋದ-ಪ್ರಮೋದಗಳಿಂದ ಸ್ವಾಗತಿಸುತ್ತಾ ಬಂದಿರೋದು. ಪ್ರತಿಸಲವೂ ಅದೇ ರಾಗ, ಅದೇ ತಾಳ ಎಂಬತ್ತಿದ್ದರೆ, ಬದುಕಿನ ಭಾವಗೀತೆಗೆ ನವನವೀನತೆ ಎಲ್ಲಿ ಬರುತ್ತಿತ್ತು? ಇಂಗ್ಲಿಷ್ ಕವಿ ಲಾರ್ಡ್